		ಮಂಗಳೂರು ನಗರ	49
		ಬಂಟ್ವಾಳ	699
		ಪುತ್ತೂರು	615
		ಒಟ್ಟು	2532
2	ಉಡುಪಿ	ಉಡುಪಿ	725
		ಕುಂದಾಪುರ	1101
		ಕಾರ್ಕಳ	432
		ಒಟ್ಟು	2258

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1288(1776)**
ಸದಸ್ಯರ ಹೆಸರು **ಶ್ರೀ ರಾಮಲಿಂಗಾರೆಡ್ಡಿ (ಜಯನಗರ)**
ಉತ್ತರಿಸಬೇಕಾದ ಸಚಿವರು **ಶ್ರೀ ಗೋವಿಂದ ಎಂ ಕಾರಜೋಳ**
(ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಬೆಂಗಳೂರು ನಗರದಲ್ಲಿ ಪಡಿತರ ಚೀಟಿ ನೀಡಲು ಬಡತನ ರೇಖೆಗಿಂತ ಕೆಳಗಿರುವ ಎಷ್ಟು ಕುಟುಂಬಗಳನ್ನು ಗುರುತಿಸಲಾಗಿದೆ,

ಬೆಂಗಳೂರು ನಗರ ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಈ ಕೆಳಕಂಡಂತೆ ಬಿಪಿಎಲ್ ಪಡಿತರ ಚೀಟಿಗಳನ್ನು ಈಗಾಗಲೇ ಗುರುತಿಸಿ ವಿತರಿಸಲಾಗಿದೆ

ಹಳದಿ 199316
ಎಎವೈ 18769
ಅನ್ನಪೂರ್ಣ 0
ಒಟ್ಟು 218085

ಆ) ಈ ವರೆಗೆ ಬೆಂಗಳೂರು ನಗರದಲ್ಲಿ ಬಿ ಪಿ ಎಲ್ ಕಾರ್ಡಿಗಾಗಿ ಅರ್ಜಿ ಸಲ್ಲಿಸಿರುವವರೆಷ್ಟು?

ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶದ ವ್ಯಾಪ್ತಿಯಲ್ಲಿ ಬಿಪಿಎಲ್ ಪಡಿತರ ಚೀಟಿಗಳಿಗಾಗಿ ಸಾರ್ವಜನಿಕರಿಂದ ವಲಯಾವಾರು ಸ್ವೀಕರಿಸಿರುವ ಮನವಿಗಳು ವಿವರ ಈ ಕೆಳಕಂಡಂತೆ ಇರುತ್ತದೆ

(1) ಪೂರ್ವ ವಲಯ – 34,543
(2)ಪಶ್ಚಿಮವಲಯ 6,155
(3)ಉತ್ತರವಲಯ 1,369

(4)ದಕ್ಷಿಣವಲಯ	3,100
(5)ಕೇಂದ್ರವಲಯ	3,534
ಒಟ್ಟು	48,701

ಇ) ಬಿ ಪಿ ಎಲ್ ಕಾರ್ಡುಗಳನ್ನು ವಿತರಿಸಲು ವಿಳಂಬವಾಗಿದೆಯೆ, ಹಾಗಿದ್ದಲ್ಲಿ, ಕಾರಣಗಳೇನು?

ಬೆಂಗಳೂರು ನಗರ ಅ ಪ ಪ್ರದೇಶದಲಿ ಅರ್ಹ ಬಿಪಿಎಲ್ ಕುಟುಂಬಗಳನ್ನು ಗುರುತಿಸಿ ಪಡಿತರ ಚೀಟಿಗಳನ್ನು ನೀಡಲು ಕ್ರಮ ವಹಿಸಲಾಗುತ್ತಿದೆ

ಈ) ಎಲ್ಲಾ ಅರ್ಹ ಅರ್ಜಿದಾರರಿಗೆ ಯಾವಾಗ ಬಿಪಿಎಲ್ ಕಾರ್ಡುಗಳನ್ನು ವಿತರಿಸಲಾಗುವುದು?

ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಪಡಿತರ ಚೀಟಿಗಳು ನೀಡುವ ಬಗ್ಗೆ ಅರ್ಜಿಗಳನ್ನು ನೀಡಲು ಮತ್ತು ಸ್ವೀಕರಿಸಲು ಪ್ರತ್ಯೇಕ ಕೇಂದ್ರಗಳನ್ನು ತೆರೆಯಲು ಕ್ರಮ ವಹಿಸಲಾಗುತ್ತಿದ್ದು, ಶೀಘ್ರವಾಗಿ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1289(1343)**
ಸದಸ್ಯರ ಹೆಸರು	**ಶ್ರೀ ರೋಷನ್ ಬೇಗ್ ಆರ್(ಜಯಮಹಲ್)**
ಉತ್ತರಿಸಬೇಕಾದ ಸಚಿವರು	**ಶ್ರೀ ಬಂಡೆಪ್ಪ ಕಾಶಂಪುರ (ಕೃಷಿ ಸಚಿವರು)**

ಅ) ರಾಜ್ಯದಲ್ಲಿ ರೈತರು ಮಾಡಿರುವ ಸಾಲವನ್ನು ಮರುಪಾವತಿ ಮಾಡಲು ಸಾಧ್ಯವಾಗದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವವರ ಸಂಖ್ಯೆ ಎಷ್ಟು (ವಿವರ ನೀಡುವುದು)

ಪ್ರಸಕ್ತ ಸಾಲಿನಲ್ಲಿ ಅಂದರೆ 01-04-2006 ರಿಂದ 12-03-2007ರ ವರೆಗೆ 243 ರೈತರ ಅತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ, ಈ ಪೈಕಿ 73 ಪ್ರಕರಣಗಳು ಸಾಲದ ಬಾಧೆಯಿಂದ ಉಂಟಾದ ಅತ್ಮಹತ್ಯೆ ಅಲ್ಲ ಎಂದು ಉಪವಿಭಾಗೀಯ ಆಯುಕ್ತರವರ ನೇತೃತ್ವದ ಸಮಿತಿಯು ತಿರಸ್ಕರಿಸಿದೆ

ಇ) ರೈತರು 18,000 ಎಕರೆ ಸರ್ಕಾರಿ ಜಮೀನನ್ನು ಅತಿಕ್ರಮಣ ಮಾಡಿ ಸಾಗುವಳಿ ಮಾಡುವಂತವರನ್ನು ಒಕ್ಕಲೆಬ್ಬಿಸಿ ಅವರುಗಳಿಗೆ ಉತ್ತಮ ಸೌಲಭ್ಯ ಒದಗಿಸಲಾಗುವುದೆಂದು ಘೋಷಿಸಿರುವುದು ನಿಜವೇ,